# ಕರಾರು ಪತ್ರ

ಸನ್ (24.02.2014)ರ ಇವರು ಒಂದನೇ ಪಾರ್ಟಿಯಾಗಿಯೂ,

ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಕಸಬಾ ಹೋಬಳಿ, ಕರಿಮನೆ ಗ್ರಾಮದ ಕಲ್ಕೆರೆ ಅಂಚೆ, ನಂ.124, ಅರಸೀತೋಟ 577123 ಇಲ್ಲಿಯ 'ಪರಿಶ್ರಮ ಪ್ಲಾಂಟೇಶನ್' ಇದರ ಪರವಾಗಿ ಮಾಲಿಕರಾದ ಸುಮಾರು 38 ವರ್ಷ ವಯಸ್ಸಿನ ಎ.ಜಿ.ಭರತ್ ಇವರು ಎರಡನೇ ಪಾರ್ಟಿಯಾಗಿಯೂ ಈ ದಿನ ಸಾಕ್ಷಿಗಳ ಸಮಕ್ಷಮ ಮಾಡಿಕೊಂಡ ಕ್ರಯದ ಕರಾರುಪತ್ರ ಯಾನೆ ಅಗ್ರಿಮೆಂಟ್‌ನ ಕ್ರಮವೇನೆಂದರೆ,

1. ಒಂದನೇ ಪಾರ್ಟಿಯು ಷೆಡ್ಯೂಲ್ ಸ್ವತ್ತುಗಳ ಮಾಲಿಕರಾಗಿರುತ್ತಾರೆ.

2. ಎರಡನೇ ಪಾರ್ಟಿಯು ಒಂದನೇ ಪಾರ್ಟಿಯ ಇಚ್ಚೆಯ ಮೇರೆಗೆ ಅವರಿಗೆ ಸೇರಿದ ಷೆಡ್ಯೂಲ್ ಸ್ವತ್ತುಗಳಲ್ಲಿ ಬೆಳೆಸಲು ಹೆಬ್ಬೇವು ಗಿಡ (ಮಿಲಿಯ ಡೂಪಿಯಾ)ನೀಡಿರುತ್ತಾರೆ. ಹೆಬ್ಬೇವು ಗಿಡಗಳೂ ಇನ್ನು ಮುಂದೆ ಒಂದನೇ ಪಾರ್ಟಿಯ ಆಸ್ತಿಯಾಗಿರುತ್ತದೆ.

3. ಎರಡನೇ ಪಾರ್ಟಿಯು ಒಂದನೇ ಪಾರ್ಟಿಗೆ ನೀಡಿದ ಹೆಬ್ಬೇವು ಗಿಡಗಳನ್ನು ಬೆಳೆಸಲು ಅವರಿಗೆ ಕಾಲಕಾಲಕ್ಕೆ ಸೂಕ್ತ ತಾಂತ್ರಿಕ ಸಲಹೆ ನೀಡುವುದು, ನೀಡಲು ಒಪ್ಪಿಕೊಂಡಿರುತ್ತಾರೆ. ಹೆಬ್ಬೇವು ಗಿಡಗಳನ್ನು ಬೆಳೆಸಲು ತಗಲುವ ಎಲ್ಲಾ ಖಚುಗಳೂ ಒಂದನೇ ಪಾರ್ಟಿಗೆ ಸೇರಿರುತ್ತದೆ.

4. ಎರಡನೇ ಪಾರ್ಟಿಯವರು ಒಂದನೇ ಪಾರ್ಟಿಯ ಇಚ್ಚೆಯ ಮೇರೆಗೆ ಅವರುಗಳೂ ಗಿಡ ನಾಡಿ ಮಾಡಿದ ಕನಿಷ್ಟ 8 ವರ್ಷದ ಬಳಿಕ ಮರದ ಬೆಳವಣಿಗೆಯ ಆದಾರದ ಮೇಲೆ ಕ್ರಯಕ್ಕೆ ಪಡೆಯಲು ಬದ್ಧರಿರುತ್ತಾರೆ. ಅದೇ ರೀತಿ ಮರದ ಬೆಳವಣಿಗೆಯ ಆಧಾರದ ಮೇಲೆ ಟನ್ ಆದಾರ ಹಾಗೂ ಘನ ಅಡಿ ಆದಾರದ ಮೇಲೆ ಬೆಲೆ ನಿಗದಿ ಮಾಡುವುದು. ಮರದ ಬೆಲೆಯನ್ನು ಕ್ರಯದ ಕಾಲದಲ್ಲಿಯ ಅಂದರೆ ವ್ಯಾಪಾರದ ದಿನದ ಮಾರುಕಟ್ಟೆ ದರದ ಆದಾರದ ಮೇಲೆ ಉಬಯ ಪಾರ್ಟಿಗಳು ನಿಗದಿ ಮಾಡಿಕೊಳ್ಳಲು ಬದ್ಧರಿರುತ್ತಾರೆ.

6. ವ್ಯಾಪಾರದ ಸಮಯದಲ್ಲಿ ಒಂದನೇ ಪಾರ್ಟಿ ಮರವನ್ನು ಕಟಾವು ಮಾಡಿ ಸಾಗಣೆಯ ಜಾಗದವರೆಗೆ ಮರವನ್ನು ತಂದುಕೊಡಲು ಬದ್ಧರಿರುತ್ತಾರೆ.

7. ಮರವನ್ನು ಕಟಾವು ಮಾಡುವುದರ ಒಳಗೆ ಉಭಯ ಪಾರ್ಟಿಗಳು ಮರದ ದರವನ್ನು ನಿಗದಿ ಮಾಡಿಕೊಳ್ಳತಕ್ಕದ್ದು.

8. ಒಂದು ವೇಳೆ ಮರದ ಕಟಾವಿನ ಒಳಗೆ ಒಂದನೇ ಪಾರ್ಟಿಗಳು ಷೆಡ್ಯೂಲ್ ಸ್ವತ್ತನ್ನು ಪರಬಾರೆ/ಮಾರಾಟ ಮಾಡಿದರೆ ಸದರೀ ಪರಬಾರೆ/ಮಾರಾಟದ ವಿಷಯವನ್ನು ಎರಡನೇ ಪಾರ್ಟಿಯ ಗಮನಕ್ಕೆ ತರತಕ್ಕದ್ದು ಮತ್ತು ಕ್ರಯದಾರರು ಎರಡನೇ ಪಾರ್ಟಿಯ ಜೊತೆ ಪ್ರತ್ಯೇಕ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.

ಷೆಡ್ಯೂಲ್ ಸ್ವತ್ತುಗಳು

.......ಜಿಲ್ಲೆ, ......ತಾಲ್ಲೂಕು.......ಹೋಬಳಿ...........ಗ್ರಾಮದ ಸ.ನಂ.............ರಲ್ಲಿ ವಿಸ್ತೀರ್ಣದ ತರೀ/ಭಾಗಾಯ್ತು/ಖುಷ್ಕಿ ಜಮೀನು; ಹಾಲಿ ಪಹಣಿ ದಾಖಲೆಗಳಂತೆ ಸ್ವತ್ತು ..............ರವರ ಖಾತೆಯಲ್ಲಿ ಇರುತ್ತದೆ.

ಈ ರೀತಿಯಾಗಿ ಉಭಯ ಪಾರ್ಟಿಗಳು ಸಾಕ್ಷಿಗಳ ಸಮಕ್ಷಮ ಈ ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆ.

ಸಾಕ್ಷಿಗಳು

ಒಂದನೇ ಪಾರ್ಟಿ

ಎರಡನೇ ಪಾರ್ಟಿ